ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕಂದಾಯ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 14/7/20

# ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ಸುಗ್ರೀವಾಜ್ಞೆಗೆ ರಾಜ್ಯಪಾಲರ ಅಂಕಿತ

ಉ.ವಾ. 14.7.20

ಬೆಂಗಳೂರು: ಕೃಷಿಕರಲ್ಲದವರು ಕೃಷಿ ಜಮೀನು ಖರೀದಿಸಲು ಅವಕಾಶ ಕಲ್ಪಿಸುವ ಕರ್ನಾಟಕ ಭೂ-ಸುಧಾರಣಾ ಕಾಯ್ದೆ ತಿದ್ದುಪಡಿ ಸುಗ್ರೀವಾಜ್ಞೆ-2020ಗೆ ರಾಜ್ಯಪಾಲರ ಅಂಕಿತ ದೊರೆತಿದೆ.

ಭೂ ಸುಧಾರಣಾ ಕಾಯ್ದೆ-1961ರ 79 ಎ, ಬಿ, ಸಿ ರದ್ದುಪಡಿಸಲು ತಿದ್ದುಪಡಿ ತರುವ ಸರ್ಕಾರದ ಉದ್ದೇಶಕ್ಕೆ ಇದೀಗ ಅಧಿಕೃತ ಒಪ್ಪಿಗೆ ಸಿಕ್ಕಂತಾಗಿದೆ. ಕೃಷಿಕರಲ್ಲದವರೂ ಇದೀಗ ರಾಜ್ಯದಲ್ಲಿ ಎಲ್ಲಿ ಬೇಕಾದರೂ ಜಮೀನು ಖರೀದಿಸಬಹುದಾಗಿದೆ. ಕೃಷಿ ಕುಟುಂಬ, ಕೃಷಿ ಕಾರ್ಮಿಕರಾಗಿರಬೇಕು ಎಂಬ ನಿಯಮ ರದ್ದಾಗಿದೆ. ಕೃಷಿಯೇತರ ಆದಾಯ 25 ಲಕ್ಷ ರೂ. ಒಳಗಿರಬೇಕು ಎಂಬ ಮಿತಿಯೂ ಇರುವುದಿಲ್ಲ. ರಾಜ್ಯದಲ್ಲಿ ಪ್ರಸ್ತುತ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿ ದಾಖಲಾಗಿರುವ 79 ಎ ಮತ್ತು ಬಿ ಪ್ರಕರಣಗಳು ಸಹ ರದ್ದಾಗಲಿವೆ.

ಕೃಷಿಕರಲ್ಲದವರೂ ಕೃಷಿ ಜಮೀನು ಖರೀದಿಗೆ ಅನುಮತಿ ನೀಡಬಾರದು ಎಂದು ಕಾಂಗ್ರೆಸ್ ಸೇರಿ ಹಲವು ರೈತ ಸಂಘಟನೆಗಳು ಪ್ರತಿಭಟನೆ ಮಾಡಿದ್ದವು. ಆದರೆ, ರೈತರ ಒತ್ತಾಯಕ್ಕೆ ಮಣಿದು ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ಜಮೀನು ಮಾರಾಟ ಮಾಡುವಂತಿಲ್ಲ ಎಂಬ ನಿಯಮ ಸೇರಿಸಿ ತಿದ್ದುಪಡಿ ಮಾಡಲಾಗಿದೆ.